**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 26/2017 ಫ್ರಾ.ಸಾ. 19**

**ಬಾ.ಸಾ.26**

| | | |
|---|---|---|
| ಸಾಕ್ಷಿದಾರರ ಹೆಸರು | - | ಬಾಚು |
| ತಂದೆಯ ಹೆಸರು | - | ಚಕ್ರ |
| ವಯಸ್ಸು | - | 67 ವರ್ಷ |
| ಉದ್ಯೋಗ | - | ಕೃಷಿ |
| ವಿಳಾಸ | - | ಪೆರ್ಣಂಕಿಲ |

ದಿನಾಂಕಃ 05-12-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

ಮೃತನ ಪರಿಚಯ ಇರುವುದಿಲ್ಲ. ಪೋಲಿಸರು ನನ್ನ ಸಮಕ್ಷಮದಲ್ಲಿ ಆತನ ಮೃತ ದೇಹವನ್ನು ಪರಿಶೀಲಿಸಿ ಯಾವುದೇ ಶವ ಮಹಜರು ತಯಾರಿಸಿರುವುದಿಲ್ಲ. ಈಗ ತೋರಿಸಿದ ಶವ ಪಂಚನಾಮೆಯಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-47 ಎಂದು, ಸಾಕ್ಷಿಯ ಸಹಿಯನ್ನು ನಿಪಿ-47(ಎ) ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ಪೋಲಿಸರು ಯಾವುದೇ ಸ್ಥಳವನ್ನು ಪರಿಶೀಲನೆ ಮಾಡಿಲ್ಲ ಮತ್ತು ಯಾವುದೇ ಸೊತ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ. ಈಗ ತೋರಿಸಿದ ನಿಪಿ-41 ರಿಂದ 43 ರಲ್ಲಿರುವ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-41(ಬಿ) ಯಿಂದ 43(ಬಿ) ಎಂದು ಗುರುತಿಸಲಾಯಿತು. ಸದ್ರಿ ದಾಖಲೆಗಳಲ್ಲಿ ಬರೆದಿರುವ ಅಂಶಗಳು ನನಗೆ ತಿಳಿದಿರುವುದಿಲ್ಲ.

**( ಈ ಹಂತದಲ್ಲಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ಕೊಡಲಾಯಿತು)**

**ಪಾಟಿ ಸವಾಲುಃ ಸರಕಾರಿ ಅಭಿಯೋಜಕರಿಂದ**

1. ದಿನಾಂಕ 11-01-2017 ರಂದು ಮಧ್ಯಾಹ್ನ 2-00 ಗಂಟೆಯಿಂದ 3-30 ಗಂಟೆಯವರೆಗೆ ಪೆರ್ಣಂಕಿಲ ಗ್ರಾಮದ ವರ್ಮಾಡಿ ಎಂಬಲ್ಲಿರುವ ನೂಜ ಎಂಬವರ ಹಾಡಿಯ ಜಾಗದಲ್ಲಿರುವ ನೀರಿಲ್ಲದ ಪಾಳು ಬಾವಿಯಲ್ಲಿ ಹೂತು ಹಾಕಿರುವ ಮೃತ ಸಂತೋಷ ಈತನ ಮೃತ ದೇಹವನ್ನು ಪರಿಶೀಲಿಸಿ ಮೃತದ ದೇಹದ ಮೇಲಿರುವ ಸುಮಾರು ಎಂಟು ಗಾಯಗಳನ್ನು ಪೋಲಿಸರು

ಪರಿಶೀಲಿಸಿ ನಿಪಿ-47 ರಂತೆ ಶವ ಮಹಜರು ಬರೆದು ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

2. ಪೋಲಿಸರು ನನ್ನ ಹಾಗೂ ಸಹ ಪಂಚರ ಸಮಕ್ಷಮದಲ್ಲಿ ಪೋಲಿಸರ ವಶದಲ್ಲಿದ್ದ 2 ಮತ್ತು 6 ನೇ ಆರೋಪಿತರು ಕೊಟ್ಟ ಸ್ವಇಚ್ಛಾ ಹೇಳಿಕೆಯ ಆಧಾರದಲ್ಲಿ ಆರೋಪಿತರು ನಮ್ಮನ್ನು ಮತ್ತು ಪೋಲಿಸರನ್ನು ಪೆರ್ಣಂಕಿಲ ಗ್ರಾಮದ ಕೊಡಿಮತ್ತಾಯ ದೇವಸ್ಥಾನದ ರಸ್ತೆ ಬಳಿ ಇರುವ ಹಾಡಿಗೆ ಕರೆದುಕೊಂಡು ಹೋಗಿ ಇದೇ ಸ್ಥಳದಲ್ಲಿ ಮೃತನನ್ನು ಮರದ ಬೆಂಚಿಗೆ ಕಟ್ಟಿ ಮಲಗಿಸಿ ಕಬ್ಬಿಣದ ಸರಳಿನಿಂದ ಹೊಡೆದು ಚೂರಿಯಿಂದ ತಿವಿದು ಕೊಲೆ ಮಾಡಿರುವ ಸ್ಥಳವೆಂದು ತೋರಿಸಿದ್ದು ಸದ್ರಿ ಸ್ಥಳವನ್ನು ಪೋಲಿಸರು ಮಧ್ಯಾಹ್ನ 12-05 ರಿಂದ 12-35 ರವರೆಗೆ ನಿಪಿ-41 ರಂತೆ ಮಹಜರು ಬರೆದು ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ನಿಪಿ-44 ರಂತೆ ಛಾಯಾ ಚಿತ್ರ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

3. ಅದೇ ದಿನ 2 ನೇ ಆರೋಪಿ ನಮ್ಮನ್ನು ಮತ್ತು ಪೋಲಿಸರನ್ನು ಆತ ಕೊಟ್ಟ ಸ್ವ ಇಚ್ಛಾ ಹೇಳಿಕೆಯ ಮೇರೆಗೆ ಪೆರ್ಣಂಕಿಲ ಗ್ರಾಮದ ಗೋಪಾಲ ಎಂಬವರ ಹಾಡಿಗೆ ಕರೆದುಕೊಂಡು ಹೋಗಿ ಇದೇ ಸ್ಥಳದಲ್ಲಿ ಮೃತ ಸಂತೋಷನ ಶವವನ್ನು ಇಟ್ಟಿರುವುದಾಗಿ ತಿಳಿಸಿದ್ದು, ಪೋಲಿಸರು ನಮ್ಮ ಸಮಕ್ಷಮ ಸದ್ರಿ ಸ್ಥಳವನ್ನು ಪರಿಶೀಲಿಸಿ ನಿಪಿ 42 ರಂತೆ ಮಹಜರು ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ನಿಪಿ-45 ರಂತೆ ಛಾಯಾ ಚಿತ್ರ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಅದೇ ಸ್ಥಳದಲ್ಲಿ ಕೃತ್ಯಕ್ಕೆ ಉಪಯೋಗಿಸಿದ ಅರ್ಧ ಇಂಚು ಉದ್ದದ ಹಗ್ಗವನ್ನು ಪೋಲಿಸರು ಅಮಾನತ್ತುಪಡಿಸಿಕೊಂಡು ಹಾಗೂ ಕಚ್ಛಾ ನಕಾಶೆ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ.

4. ಅದೇ ದಿನ 2 ನೇ ಆರೋಪಿ ಕೊಟ್ಟ ಸ್ವ ಇಚ್ಛಾ ಆಧಾರದ ಮೇಲೆ ಆರೋಪಿ ನಮ್ಮನ್ನು ಮತ್ತು ಪೋಲಿಸರನ್ನು ಪೆರ್ಣಂಕಿಲ ಗ್ರಾಮದ ವರ್ಮಾಡಿ ಭಾಗೀರಥಿ ನಿಲಯ ಎಂಬಲ್ಲಿಗೆ ಕರೆದುಕೊಂಡು ಹೋಗಿ ಅದೇ ಮನೆಯಲ್ಲಿ ಕೃತ್ಯಕ್ಕೆ ಉಪಯೋಗಿಸುವ ಸಲುವಾಗಿ ಎರಡು ಫೈಬರ್ ಕುರ್ಚಿ ಮತ್ತು ಒಂದು ಮರದ ಬೆಂಚನ್ನು ಉಪಯೋಗಿಸಿರುವುದಾಗಿ ತಿಳಿಸಿದ್ದು ಆ ಸಮಯದಲ್ಲಿ ಆ ಮನೆಯ ನಿವಾಸಿ ಶಶಿಧರ್ ಕುಲಾಲ ಹಾಜರಿದ್ದು ಅವರನ್ನು ವಿಚಾರಿಸಿದಾಗ, ಅವರು ವಿಚಾರವನ್ನು ಒಪ್ಪಿಕೊಂಡು ಕೃತ್ಯಕ್ಕೆ ಉಪಯೋಗಿಸಿದ ಫೈಬರ್ ಕುರ್ಚಿ ಮತ್ತು ಒಂದು ಮರದ ಬೆಂಚನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-43 ರಂತೆ ಮಹಜರು ಬರೆದು ಸದ್ರಿ ಸೊತ್ತುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ಛಾಯಾ ಚಿತ್ರ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ನಿಪಿ-46 ರಂತೆ ಛಾಯಾ ಚಿತ್ರ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಆರೋಪಿತರ ಪರವಾಗಿ ಪಾಟೀ ಸವಾಲುಃ</u> ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.